**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ 01**

**ಪ್ರಾಸಾ ಃ 01**

| | | |
|---|---|---|
| **ಹೆಸರು** | **ಃ** | **ಮಂಜುನಾಥ** |
| **ತಂದೆಯ ಹೆಸರು** | **ಃ** | **ಆರ್ ನಾಗರಾಜು** |
| **ವಯಸ್ಸು** | **ಃ** | **35 ವರ್ಷ** |
| **ವೃತ್ತಿ** | **ಃ** | **ಚಿಲ್ಲರೆ ಅಂಗಡಿ ವ್ಯಾಪಾರ** |
| **ವಾಸ** | **ಃ** | **ದೇವರಾಜನಗರ** |

**ಈ ದಿನ ದಿನಾಂಕಃ 26.11.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-2 ಪವನ್‌ಕುಮಾರ್ ಗೊತ್ತು, ಚಾಸಾ 3 ಮತ್ತು 4 ರವರ ಪರಿಚಯ ಸಹ ನನಗೆ ಇದೆ. ಈಗ ನ್ಯಾಯಾಲಯದಲ್ಲಿರುವ ಆರೋಪಿ ಆನಂದ ಗೊತ್ತು, ಲೋಕಿ ಮತ್ತು ಸ್ವಾಮಿ ಎಂಬುವವರು ಸಹ ಗೊತ್ತು, ನಮ್ಮ ತಂದೆ ತಾಯಿಗೆ ನಾವು ಒಟ್ಟು 4 ಜನ ಮಕ್ಕಳು. ಮೊದಲನೆಯವರು ವೇದಾವತಿ, 2ನೇಯವನು ನಾನು ಮಂಜುನಾಥ, 3ನೇಯವರು ನನ್ನ ತಂಗಿ ಲತಾ, 4ನೇಯವನು ನನ್ನ ತಮ್ಮ ಗಂಗಾಧರ. ದಿಃ 07.01.2019 ರಂದು ರಾತ್ರಿ ನನ್ನ ತಮ್ಮ ಗಂಗಾಧರನನ್ನು ಹತ್ಯೆ ಮಾಡಲಾಗಿತ್ತು, ಆ ದಿನ ರಾತ್ರಿ ಸುಮಾರು 10.100 ಗಂಟೆಗೆ ಚಾಸಾ 2 ಪವನ್‌ಕುಮಾರ್ ನಮ್ಮ ಮನೆಯ ಬಳಿ ಗಾಬರಿಯಿಂದ ಓಡಿ ಬಂದು ಆತ ಮತ್ತು ನನ್ನ ತಮ್ಮ ಕೊರಚರಹಟ್ಟಿಯಲ್ಲಿರುವ ಪ್ರೀತಿ ವೈನ್ಸ್ ಬಳಿ ನಿಂತು ಮಾತನಾಡುತ್ತಿದ್ದಾಗ ಈಗ ನ್ಯಾಯಾಲಯದಲ್ಲರುವ ಆರೋಪಿ ಆನಂದ್ ಅಲಿಯಾಸ್ ಕಬಾಬ್ ಹಾಗಾ ಆತನ ಸಹಚರರಾದ ಲೋಕಿ ಮತ್ತು ಸ್ವಾಮಿ ಮೂರು ಜನ ಡಿಯೋ ಬೈಕಿನಲ್ಲಿ ಬಂದು ಅವರೊಂದಿಗೆ ಏಕಾಏಕಿ ಜಗಳ ತೆಗೆದು ಕಣ್ಣಿಗೆ ಕಾರದಪುಡಿ ಎರಚಿ ಮಚ್ಚಿನಿಂದ ನನ್ನ ತಮ್ಮನ ತಲೆಗೆ, ಕಣ್ಣಿನ ಬಳಿ, ಕಿವಿ ಭಾಗ, ಬಾಯಿ, ಎಡಕೆನ್ನೆ, ಎಡಗೈ

ತೋಳಿನ ಮೇಲೆ ಹಲ್ಲೆ ಮಾಡಿದರು ಎಂದು ಹೇಳಿದ. ಚಾಸಾ 2 ರವರ ತಲೆ ಮತ್ತು ಕೈಗೆ ಏಟಾಗಿದ್ದು ಆತನ ತುಟಿಯಿಂದ ರಕ್ತ ಬರುತ್ತಿತ್ತು. ಆತನ ಜೊತೆ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ರಕ್ತಗಾಯಗಳಾಗಿದ್ದ ನನ್ನ ತಮ್ಮ ಅಲ್ಲೇ ಬಿದ್ದಿದ್ದ. ನಾನು ಕೂಡಲೇ ಆಟೋ ತೆಗೆದುಕೊಂಡು ಹೋಗಿ ಚಾಸಾ 2 ಮತ್ತು ಸ್ಥಳೀಯರ ಸಹಾಯದಿಂದ ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆತನನ್ನು ವೈದ್ಯರು ಪರೀಕ್ಷಿಸಿ ಉಪಚರಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ 10 ನಿಮಿಷಗಳ ನಂತರ ಆತ ತೀರಿಕೊಂಡಿದ್ದಾನೆ ಎಂಬ ವಿಚಾರವನ್ನು ನಮಗೆ ವೈದ್ಯರು ತಿಳಿಸಿದರು.

2. ಮರುದಿನ ನಾನು ಪೋಲೀಸು ಠಾಣೆಗೆ ಹೋಗಿ ದೂರನ್ನುದಾಖಲು ಮಾಡಿದೆ. ನಾನು ನೀಡಿದ ದೂರು ಈಗ ನೋಡಿದ ದಾಖಲೆಯಾಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ದೂರು ದಾಖಲು ಮಾಡಿಕೊಂಡ ನಂತರ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿ ರಕ್ತಮಿಶ್ರಿತ ಮಣ್ಣು, ರಕ್ತಮಿಶ್ರಿತ ಜಲ್ಲಿ ಕಲ್ಲುಗಳು ಹಾಗೂ ಸ್ಯಾಂಪಲ್ ಮಣ್ಣು ಇವುಗಳನ್ನು ಅಮಾನತ್ತು ಪಡಿಸಿಕೊಂಡರು. ಆ ಸಮಯ ನಾನು ಮತ್ತು ಚಾಸಾ-3 ಮತ್ತು 4ರವರುಗಳು ಸಹಿ ಮಾಡಿದ್ದೇವೆ. ಸದರಿ ಪಂಚನಾಮೆಯನ್ನು ನಿಪಿ2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸದರಿ ಸಮಯ ಪೋಲೀಸರು ಪೋಟೋಗಳನ್ನು ಸಹ ತೆಗೆದರು. ಸಾಕ್ಷಿದಾರರು ನೋಡಿ ಗುರುತಿಸಿದ ಎರಡುಪೋಟೋಗಳನ್ನು ಕ್ರಮವಾಗಿ ನಿಪಿ3 ಮತ್ತು ನಿಪಿ4 ಎಂದು ಗುರುತಿಸಲಾಯಿತು ನಿಪಿ-3 ಪೊಟೋದಲ್ಲಿ ಪೋಲೀಸರ ಜೊತೆ ನಾನು, ಚಾಸಾ 3 ಮತ್ತು 4 ಕೃತ್ಯ ನಡೆದ ಸ್ಥಳದಲ್ಲಿ ಇರುವುದು ಕಾಣುತ್ತದೆ. ನಿಪಿ-4 ಪೋಟೋದಲ್ಲಿ ಶೆಟ್ಟರ್ ಹಾಗೂ ಗೋಡೆಯ ಮೇಲೆ ನನ್ನ ತಮ್ಮನ ರಕ್ತದ ಕಲೆಗಳು ಬಿದ್ದಿರುವುದು ಕಂಡು ಬರುತ್ತದೆ. ಪೋಲೀಸರು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

3. **ಈ ಹಂತದಲ್ಲಿ ಮಾಲುಪಟ್ಟಿ 03/2019 (ಪಿಆರ್11/2020) ರಲ್ಲಿರುವ ಐಟಂ 1 ಮತ್ತು 2 ವಸ್ತುಗಳನ್ನು ಮೊಹರು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ಅವುಗಳನ್ನು ಸಾಕ್ಷಿದಾರರಿಗೆ ತೋರಿಸುವ ಸಲುವಾಗಿ ಬಟ್ಟೆಯನ್ನು ತೆರೆದು ತೋರಿಸಲಾಗಿ ಸಾಕ್ಷಿದಾರರು ರಕ್ತ ಮಿಶ್ರಿತ ಮಣ್ಣು ಮತ್ತು ಜಲ್ಲಿಕಲ್ಲುಗಳು ಹಾಗೂ ಮಾದರಿ ಮಣ್ಣು ಇರುವ ಎರಡು ಪ್ಲಾಸ್ಟಿಕ್ ಡಬ್ಬಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು.**

4. ಮು.ಮಾ 1 ಮತ್ತು 2 ಇವುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಸಹ ನನ್ನ ಹಾಗೂ ಚಾಸಾ 3 ಮತ್ತು 4 ರವರುಗಳ ಸಹಿ ಇವೆ. ಈಗ ನನಗೆ ತೋರಿಸಿದ 14 ಪೋಟೋಗಳಲ್ಲಿ ನನ್ನ ತಮ್ಮನ ಶವ ಕಾಣುತ್ತಿದೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ-5 ರಿಂದ ನಿಪಿ-18 ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸಮಯದಲ್ಲಿ ನನ್ನ ತಮ್ಮ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

5. **ಈ ಹಂತದಲ್ಲಿ ಮಾಲುಪಟ್ಟಿ 04/2019 (ಪಿಆರ್11/2020) ರಲ್ಲಿರುವ ಐಟಂ 1 ರಿಂದ 4 ವಸ್ತುಗಳನ್ನು ಮೊಹರು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ಅವುಗಳನ್ನು ಸಾಕ್ಷಿದಾರರಿಗೆ ತೋರಿಸುವ ಸಲುವಾಗಿ ಬಟ್ಟೆಯನ್ನು ತೆರೆದು ತೋರಿಸಲಾಗಿ ಸಾಕ್ಷಿದಾರರು ಒಂದು ರಕ್ತಕಲೆಯಾಗಿರುವ ಎಡಭುಜ, ಬಲಭುಜ ಬಳಿ ಹರಿದಿರುವ ಕಡುನೀಲಿ ಬಣ್ಣದ ರೆಕ್ಸಿನ್ ಜರ್ಕಿನ್, ರಕ್ತ ಕಲೆಯಾದ ಒಂದು ಆಕಾಶ ನೀಲಿ ಬಣ್ಣದ ಹೊಟ್ಟೆಯ ಭಾಗದಲ್ಲಿ ಪ್ರಿಂಟೆಡ್ ಇರುವ ಅರ್ಧ ತೋಳಿನ ಟೀ ಶರ್ಟ್‌ದ ಒಂದು ಸಿಮೆಂಟ್ ಬಣ್ಣದ ಲೆವಿಸ್ ಹೆಸರಿನ ಕಪ್ಪು ಬಣ್ಣದ ಕೊಂಬೆಗಳ ಚಿತ್ರದ ಕಾಚ, ರಕ್ತ ಕಲೆಯಾಗಿರುವ ಒಂದು ಕಪ್ಪು ಬಣ್ಣದ ಅರಿಶಿನ ಗೆರೆ ಬಾರ್ಡರ್ ಇರುವ ನೈಟ್ ಪ್ಯಾಂಟ್ ಇವುಗಳನ್ನು ನೋಡಿ ಅವುಗಳು ನನ್ನ**

**ತಮ್ಮನು ಹಾಕಿಕೊಂಡಿದ್ದ ಬಟ್ಟೆಗಳು ಎಂದು ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ಮು.ಮಾ 3 ರಿಂದ 6 ಎಂದು ಗುರುತಿಸಲಾಯಿತು.**

6. ನಮ್ಮ ಚಿಕ್ಕಪ್ಪನ ಮಕ್ಕಳ ಮೇಲೆ 2017 ರಲ್ಲಿ ಸುನೀಲ ಎಂಬಾತ ಗಲಾಟೆ ಮಾಡಿದ ಎಂಬ ಕಾರಣಕ್ಕೆ ನನ್ನ ತಮ್ಮ ಮತ್ತು ಸುನೀಲ ಮದ್ಯೆ ಗಲಾಟೆಯಾಗಿ ಚಾಕುವಿನಿಂದ ಚುಚ್ಚಿದ್ದಾನೆ ಎಂಬ ಆಪಾದನೆ ಮೇಲೆ ನನ್ನ ತಮ್ಮನನ್ನು ಪೋಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೆ ಆತ ಮನೆಗೆ ಬಂದು ಬಿಸಲೇರಿ ನೀರು ಕ್ಯಾನುಗಳನ್ನು ಸರಬರಾಜು ಮಾಡಿಕೊಂಡಿದ್ದ. ನನ್ನ ತಮ್ಮ, ಚಾಸಾ 2 ಮತ್ತು ಈ ಮೇಲಿನ ವ್ಯಕ್ತಿಗಳೆಲ್ಲಾ ಮೊದಲು ಸ್ನೇಹಿತರಾಗಿದ್ದು ಜೊತೆಯಲ್ಲೇ ಓಡಾಡಿಕೊಂಡಿದ್ದು, ಯಾವುದೇ ಹಳೆಯ ದ್ವೇಷದಿಂದ ಅವರು ಸೇರಿಕೊಂಡು ನನ್ನ ತಮ್ಮನನ್ನು ಕೊಲೆ ಮಾಡಿದ್ದಾರೆ. ನನ್ನ ತಮ್ಮ ಹಾಗೂ ಆತನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳ ಮದ್ಯೆ ಹಣಕಾಸಿನ ವಿಚಾರದಲ್ಲಿ ವೈಷಮ್ಯ ಇತ್ತು ಎಂದು ಚಾಸಾ 2 ಪವನ ತಿಳಿಸಿದ್ದ. ದೂರು ದಾಖಲು ಮಾಡಿದ್ದಲೇ ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆಗಳನ್ನು ಸಹ ಕೊಟ್ಟಿದ್ದೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರವರಿಂದ :</u>**

7. ನಾನು 9ನೇ ತರಗತಿಯವರೆಗೂ ಓದಿದ್ದೇನೆ. ಚಾಸಾ-2 ನನ್ನ ತಮ್ಮನ ಜೊತೆ ಬಿಸಲೇರಿ ನೀರಿನ ಕ್ಯಾನ್ ಸರಬರಾಜು ಮಾಡುವ ಕೆಲಸ ಮಾಡುತ್ತಿದ್ದ ಎಂದರೆ 2-3 ತಿಂಗಳುಗಳ ಕಾಲ ಮಾಡಿದ್ದ. ವ್ಯಾಪಾರದಿಂದ ಬಂದ ಹಣವನ್ನು ನಮ್ಮ ತಾಯಿಯವರಿಗೆ ಕೊಟ್ಟು ಸಂಜೆ ಖರ್ಚಿಗೆ ನನ್ನ ತಮ್ಮ ಹಣ ತೆಗೆದುಕೊಂಡು ಹೋಗುತ್ತಿದ್ದ. ನಮ್ಮ ತಾಯಿಯಿಂದ ಚಾಸಾ 2 ಹಣ ಪಡೆದುಕೊಳ್ಳುತ್ತಿರಲಿಲ್ಲ ಆದರೆ ನನ್ನ ತಮ್ಮನಿಂದ ಹಣ ಪಡೆದುಕೊಳುತ್ತಿದ್ದ. ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಚಾಸಾ 2 ನಾವು ಹೇಳಿದಂತೆ ಕೇಳುತ್ತಿದ್ದ. ಕೆಲಸದ ವಿಚಾರದಲ್ಲಿ ಮಾತ್ರ ಎಂದು ಸಾಕ್ಷಿದಾರರು ಮುಂದುವರೆದು ನುಡಿ

ದಿರುತ್ತಾರೆ. ಇತರೆ ವಿಚಾರಗಳಲ್ಲೂ ಸಹ ನಾವು ಹೇಳಿದಂತೆ ಆತ ಕೇಳುತ್ತಿದ್ದ ಎಂದರೆ ಸರಿಯಲ್ಲ.

8. ಚಾಸಾ 5 ನನ್ನ ತಂದೆ ಎಂದರೆ ಸರಿ. ಚಾಸಾ 9 ನನ್ನ ಅಕ್ಕನ ಗಂಡ ಎಂದರೆ ಸರಿ. ಚಾಸಾ5 ರಿಂದ 7, 10, 11, 15 ರಿಂದ 17 ಮತ್ತು 19 ರವರುಗಳು ನನಗೆ ಪರಿಚಯ ಇದ್ದಾರೆ ಎಂದರೆ ನಾವೆಲ್ಲಾ ಒಂದೇ ಏರಿಯಾದಲ್ಲಿರುತ್ತೇವೆ. ಅವರೆಲ್ಲಾ ಆರೋಪಿಗೂ ಸಹ ಸ್ನೇಹಿತರಾಗಿರುತ್ತಾರೆ. ಚಾಸಾ-19 ರಾಜೇಶ ಮೂರು ದಿನಗಳ ಹಿಂದೆ ತೀರಿಕೊಂಡಿದ್ದಾನೆ ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

9. ಘಟನೆಯೂದ ದಿನ ನನ್ನ ತಮ್ಮ ರಾತ್ರಿ 9.20 ಗಂಟೆಗೆ ಜರ್ಕಿನ್ ಹಾಕಿಕೊಂಡು ಮನೆಯಿಂದ ಹೊರಗಡೆ ನಡೆದು ಹೋಗಿದ್ದ. ಆತನ ಬಳಿ ಮೊಬೈಲ್ ಫೋನ್ ಇತ್ತು. ನಾನು ದೂರು ಕೊಡುವಾಗ ಪೋಲೀಸರು ಸದರಿ ಫೋನ್ ಬಗ್ಗೆ ವಿಚಾರಿಸಿದ್ದು ಅದೇ ದಿನ ನನ್ನ ತಮ್ಮನ ಮೊಬೈಲನ್ನು ಪೋಲೀಸರ ವಶಕ್ಕೆ ಕೊಟ್ಟಿದ್ದೆ. ನನ್ನ ತಮ್ಮನ ಮೊಬೈಲ್ ನಂಬರ್ ಏನು ಎಂದು ಪೋಲೀಸರು ಕೇಳಿರಲಿಲ್ಲ ಆದರೆ ಫೋನ್ ಮಾತ್ರ ತೆಗೆದುಕೊಂಡರು. ಘಟನೆ ನಡೆದ ದಿನ ರಾತ್ರಿ ನಮ್ಮ ಏರಿಯಾದಲ್ಲಿ ಮುನಿರಾಜು ಮತ್ತು ಪಾಂಡು ಎಂಬ ಪೋಲೀಸರು ರಾತ್ರಿ ಗಸ್ತಿನ ಕರ್ತವ್ಯದಲ್ಲಿದ್ದರು. ಸದರಿ ಪೋಲೀಸರ ಮೊಬೈಲ್ ನಂಬರ್ ನನಗೆ ಗೊತ್ತಿಲ್ಲ.

10. ನಮ್ಮ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ಕೃತ್ಯ ನಡೆದ ಜಾಗ ಇದ್ದು ಅದನ್ನು ಕೊರಚರಹಟ್ಟಿ ಎಂದು ಕರೆಯುತ್ತಾರೆ. ನಾನು ವಿಚಾರ ತಿಳಿದುಕೊಂಡು ಚಾಸಾ2 ರವರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಓಡಿ ಹೋದಾಗ ನನ್ನ ತಮ್ಮನನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರೂ ಇರಲಿಲ್ಲ. ವಾಪಸ್ಸು ನಮ್ಮ ಮನೆಬಳಿ ಬಂದು ನಮಗೆ ಸೇರಿದ ಕೆಎ.02.ಎಂ.9445 ಇದನ್ನು ತೆಗೆದುಕೊಂಡು ಹೋಗಿ ನನ್ನ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ. ಸದರಿ ಆಟೋ ಸಂಖ್ಯೆಯನ್ನು ದೂರಿನಲ್ಲಿ ಬರೆದಿಲ್ಲ. ಪೋಲೀಸರು

ಸಹ ಆಟೋ ಸಂಖ್ಯೆಯನ್ನು ಕೇಳಲಿಲ್ಲ. ನನ್ನ ತಮ್ಮನನ್ನು ಆಟೋದಲ್ಲಿ ಕೂರಿಸಲು ಸಹಾಯ ಮಾಡಿದ ವ್ಯಕ್ತಿಗಳ ಪೈಕಿ ಚಾಸಾ 3 ಬಾಲಕೃಷ್ಣ ಎಂಬುವವರ ಹೆಸರು ಮಾತ್ರ ಈಗ ನೆನಪಿದೆ. ನಮ್ಮ ತಾಯಿ ಜೊತೆ 4-5 ಜನ ಅಲ್ಲಿಗೆ ಓಡಿ ಬಂದಿದ್ದು ಅವರಲ್ಲಿ ಒಬ್ಬರ ಹೆಸರು ಚಂದ್ರ ಎಂದಾಗಿರುತ್ತದೆ. ಸದರಿ ವ್ಯಕ್ತಿಗಳು ಸಹಾಯ ಮಾಡಿದ್ದರು ಎಂದು ದೂರಿನಲ್ಲಿ ಬರೆಸಿಲ್ಲ. ಪೋಲೀಸರು ಸಹ ಇಲ್ಲಿವರೆಗೆ ಆ ಬಗ್ಗೆ ವಿಚಾರಿಸಿಲ್ಲ.

11. ಅದೇ ದಿನ ನಾನಾಗಲೀ ಅಥವಾ ನನ್ನ ಜೊತೆ ಆಸ್ಪತ್ರೆಗೆ ಬಂದವರಾಗಲೀ ಪೋಲೀಸರಿಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿರಲಿಲ್ಲ. ಆ ದಿನ ವೈದ್ಯರೇ ಪೋಲೀಸರಿಗೆ ಫೋನ್ ಮಾಡಿದ್ದು ಇನ್ಸ್‌ಪೆಕ್ಟರ್ ಆಸ್ಪತ್ರೆ ಬಳಿ ಬಂದಿದ್ದರು. ಸದರಿ ಪೋಲೀಸು ಅಧಿಕಾರಿಯ ಹೆಸರು ಪಾಟೀಲ್. ನನ್ನನ್ನು ಸದರಿ ಪೋಲೀಸು ಅಧಿಕಾರಿ ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರಲಿಲ್ಲ ಆದರೆ ನಮ್ಮ ತಾಯಿಯವರನ್ನು ವಿಚಾರಣೆ ಮಾಡುತ್ತಿದ್ದರು. ಅದೇ ದಿನ ಮದ್ಯರಾತ್ರಿ ಕಳೆದ 12.30 ಗಂಟೆಗೆ ನಾನು ನಿಪಿ-1 ದೂರನ್ನು ಲಿಖಿತವಾಗಿ ಕೊಟ್ಟಿದ್ದೆ ಆದರೆ 12.00 ಎಎಂ ಎಂದು ದೂರಿನಲ್ಲಿ ಪೋಲೀಸರು ನಮೂದಿಸಿದ್ದಾರೆ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ನಿಪಿ-1 ದೂರು ನನ್ನ ಕೈ ಬರವಣಿಗೆಯಲ್ಲಿ ಇಲ್ಲ. ನಾನು ಆ ಸಮಯ ಆಘಾತದಲ್ಲಿದ್ದ ಕಾರಣ ಹಾಗೂ ಕೈ ಕಾಲುಗಳು ನಡುಗುತ್ತಿದ್ದ ಕಾರಣ ನಾನು ಹೇಳಿದಂತೆ ಚಾಸಾ 19 ರಾಜೇಶ ಆ ದೂರನ್ನು ಬರೆದಿದ್ದಾನೆ. ಚಾಸಾ-2 ಮನೆ ಬಳಿ ನನ್ನ ಏನು ವಿಚಾರ ಹೇಳಿದ್ದನೋ ಅದನ್ನೇ ನಾನು ಚಾಸಾ 19 ರವರಿಗೆ ಹೇಳಿ ಬರೆಸಿದ್ದೆ.

12. ಆಸ್ಪತ್ರೆ ಬಳಿ ಬಂದಿದ್ದ ಪೋಲೀಸರು ಅದೇ ದಿನ ರಾತ್ರಿ ಗಾಯಾಳು ಚಾಸಾ-2 ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದರು. ಕೃತ್ಯ ನಡೆದ ಸ್ಥಳ ತೋರಿಸುವಂತೆ ನನ್ನನ್ನು ಅದೇ ದಿನ ರಾತ್ರಿ ಪೋಲೀಸರು ಕೇಳಲಿಲ್ಲ ಆದರೆ ಮರುದಿನ ಅವರನ್ನು ಕರೆದುಕೊಂಡು ಹೋಗಿ ಆ ಜಾಗವನ್ನು ತೋರಿಸಿದೆ. ನನ್ನ ತಮ್ಮ ತೀರಿಕೊಂಡಿದ್ದಾನೆ ಎಂದು ವೈದ್ಯರು ನಮಗೆ ತಿಳಿಸಿದ ನಂತರ ಪೋಲೀಸರು ಆಸ್ಪತ್ರೆ ಬಳಿ ಬಂದಿದ್ದರು. ನನ್ನ ತಮ್ಮ ಹಾಗೂ

ಆತನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳ ಮದ್ಯೆ ಹಳೆ ವಿಚಾರದಲ್ಲಿ ದ್ವೇಷ ಇದೆ ಎಂದು ಮಾತ್ರ ಗೊತ್ತು ಆ ವಿಚಾರ ಏನು ಎಂದು ಸ್ಪಷ್ಟವಾಗಿ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಹಣಕಾಸಿನ ವಿಚಾರದ ದ್ವೇಷದ ಬಗ್ಗೆ ಸಹ ನನಗೆ ಸ್ಪಷ್ಟ ಮಾಹಿತಿ ಇರಲಿಲ್ಲ. ಚಾಸಾ2 ನನಗೆ ಹಣಕಾಸಿನ ವಿಚಾರ ಏನು ಎಂದು ಸಂಪೂರ್ಣವಾಗಿ ಮಾಹಿತಿ ಕೊಟ್ಟಿರಲಿಲ್ಲ.

13. ನನ್ನ ತಮ್ಮನ ವಿರುದ್ದ ಪೋಲೀಸರು ಒಟ್ಟು 3 ಕೇಸುಗಳನ್ನು ದಾಖಲು ಮಾಡಿದ್ದರು. ಅದರಲ್ಲಿ ಒಂದು ಹಿರಿಯೂರು ಪೋಲೀಸು ಠಾಣೆಯಲ್ಲಿ ಕೊಲೆ ಆರೋಪದ ಕೇಸು ಆಗಿತ್ತು ಎಂದರೆ ಸರಿ. ಮತ್ತೊಂದು ಶ್ರೀರಂಗಪಟ್ಟಣ ಪೋಲೀಸು ಠಾಣೆಯಲ್ಲಿ ದರೋಡೆ ಕೇಸು ಆಗಿತ್ತು ಎಂದರೆ ಸರಿ. ಮತ್ತೊಂದು ಸುನೀಲ್ ಎಂಬಾತನ ಮೇಲೆ ಕೊಲೆ ಯತ್ನದ ಕೇಸು ಆಗಿತ್ತು. ನನ್ನ ತಮ್ಮನ ವಿರುದ್ದ ಪೋಲೀಸರು ರೌಡಿ ಶೀಟ್ ತೆರೆದಿದ್ದರು ಎಂದರೆ ಸರಿ.

14. ಚಾಸಾ-2 ರವರು ಕೊಂಗಾಡಿಯಪ್ಪನವರ ಪ್ರತಿಮೆಯನ್ನು ವಿಕಾರಗೊಳಿಸಿದ್ದ ಎಂಬ ಕಾರಣಕ್ಕೆ 3 ತಿಂಗಳು ಜೈಲಿನಲ್ಲಿದ್ದ ಎಂದರೆ ಸರಿ ಆದರೆ ಎಷ್ಟು ದಿನ ಇದ್ದ ಎಂದು ನಿಖರವಾಗಿ ಗೊತ್ತಿಲ್ಲ. ಆ ಪ್ರಕರಣದಲ್ಲಿ ನಾವು ಜಾಮೀನು ಕೊಟ್ಟು ಬಿಡಿಸಿದ್ದೆ ಎಂದರೆ ಸರಿಯಲ್ಲ. ನಾವು ಹೇಳಿದ ಹಾಗೆ ಆತ ಕೇಳಿಕೊಂಡು ನಮ್ಮ ಜೊತೆ ಕೆಲಸ ಮಾಡಿಕೊಂಡು ಇರಲಿ ಎಂಬ ಕಾರಣಕ್ಕೆ ನಾವೇ ಜಾಮೀನು ಕೊಟ್ಟು ಬಿಡಿಸಿದ್ದೆವು ಎಂದರೆ ಸರಿಯಲ್ಲ.

15. ನನ್ನ ತಮ್ಮ ಹಾಗೂ ಚಾಸಾ 2 ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ಘಟನೆ ನಡೆದ ದಿನ ನನ್ನ ತಮ್ಮ ರಾತ್ರಿ ಜರ್ಕಿನ್ ಹಾಕಿಕೊಂಡು ಹೊರಗೆ ಹೋದಂತಹ ಸಮಯ ನಾನು ಮನೆಯಲ್ಲಿ ಇರಲಿಲ್ಲ. ಆತ ಮನೆಯಿಂದ ಹೊರಡುವಾಗ ಒಂದು ಮಚ್ಚನ್ನು ಜರ್ಕಿನ್‌ನಲ್ಲಿಟ್ಟುಕೊಂಡು ಹೋದ ಬಗ್ಗೆ ನನಗೇನೂ ಮಾಹಿತಿ ಇಲ್ಲ. ನನ್ನ ತಮ್ಮ ಮನೆಯಿಂದ ಹೊರಗೆ ಹೋದ ನಂತರ ಚಾಸಾ2 ರವರ ಮದ್ಯಪಾನ ಮಾಡಿದ್ದನೋ

ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ 2 ನನ್ನ ತಮ್ಮನನ್ನು ಆಟೋದಲ್ಲಿ ಕರೆದುಕೊಂಡು ಹೋದಂತಹ ಸಮಯ ಅವರು ಮದ್ಯಪಾನ ಮಾಡಿರುವ ವಾಸನೆ ನನಗೆ ಬಂದಿರಲಿಲ್ಲ. ಆಟೋದಲ್ಲಿ ಆಸ್ಪತ್ರೆಗೆ ಹೋದಂತಹ ಸಮಯ ನನ್ನ ತಮ್ಮ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಚಾಸಾ 2 ರ ತುಟಿ ಮೇಲೆ ರಕ್ತಗಾಯವಾಗಿದ್ದರೂ ಸಹ ಆತ ಸ್ಪಷ್ಟವಾಗಿ ಮಾತನಾಡುತ್ತಿದ್ದ.

16. ನಿಪಿ-1 ರ 2ನೇ ಪುಟದಲ್ಲಿ ಒಂದು ಕಡೆ ಕೊಲೆ ಎಂಬ ಪದ ತಿದ್ದುಪಡಿ ಆಗಿದ್ದು ಆ ಜಾಗದಲ್ಲಿ ಪೋಲೀಸರು ನನ್ನ ಸಹಿ ಪಡೆದುಕೊಳ್ಳುವ ಪ್ರಯತ್ನ ಮಾಡಿರಲಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ನುಡಿದಿರುವ ಹಾಗೆ ಈಗ ನ್ಯಾಯಾಲಯದಲ್ಲಿರುವ ಆರೋಪಿಯ ಜೊತೆ ಲೋಕಿ ಮತ್ತು ಸ್ವಾಮಿ ಮೂರು ಜನ ನನ್ನ ತಮ್ಮನ ಮೇಲೆ ಕಾರದ ಪುಡಿ ಎರಚಿ ಆತನ ಹಾಗೂ ಚಾಸಾ2 ರವರ ಮೇಲೆ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಯಾರೋ ಅನ್ಯ ವ್ಯಕ್ತಿಗಳು ಆಕೃತ್ಯವನ್ನು ಎಸಗಿದ್ದರೂ ಚಾಸಾ-2 ರ ಮಾತನ್ನು ಕೇಳಿಕೊಂಡು ನಾನು ಪೋಲೀಸರಿಗೆ ಸುಳ್ಳು ದೂರನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ.

17. ಬೆಳಗ್ಗೆ ಒಂದು ಗಂಟೆ ಕಾಲ ಶವಾಗಾರದ ಬಳಿ ಇದ್ದು 9.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಪೋಲೀಸರ ಜೊತೆ ಹೋಗಿದ್ದೆ. ಪೋಲೀಸರಿಗೆ ನಾನೇ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದೆ. ಶವಾಗಾರದ ಬಳಿ ಚಾಸಾ 3 ಮತ್ತು 4 ಇದ್ದರು. ಪೋಲೀಸರೇ ಅವರನ್ನು ಸಾಕ್ಷಿದಾರರಾಗಿ ಬನ್ನಿ ಎಂದು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು. ನಿಪಿ-2 ಮಹಜರನ್ನು ಪೋಲೀಸರು ಆ ಸ್ಥಳದಲ್ಲಿ ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿಸಿದ್ದರು. ಕೃತ್ಯ ನಡೆದ ಸ್ಥಳದಲ್ಲಿ ಒಂದು ಮನೆಯವರನ್ನು ಪೋಲೀಸರು ವಿಚಾರಿಸಿದ್ದು ರಾತ್ರಿ ಕೂಗಾಡುತ್ತಿದ್ದ ಶಬ್ದ ಮಾತ್ರ ಕೇಳಿಸಿತ್ತು ಎಂದು ಅವರು ಪೋಲೀಸರಿಗೆ ಹೇಳುತ್ತಿದ್ದರು. ಹಾಗೆ ಹೇಳಿದ ವ್ಯಕ್ತಿಗಳ ಹೆಸರುಗಳು ನಾರಾಯಣಪ್ಪ ಮತ್ತು ಈಶ್ವರಪ್ಪ. ಉಳಿದಂತಹ ಜಾಗದಲ್ಲಿ ಎರಡೂ ಕಡೆ ಫ್ಯಾಕ್ಟರಿಗಳು ಇದ್ದವು, ಅಲ್ಲಿ ಯಾರೂ ಇರಲಿಲ್ಲ. ಆ ಸ್ಥಳದಲ್ಲಿ ಬೇರೆ ಯಾವುದೇ

ವಾಸದ ಮನೆಗಳು ಇರಲಿಲ್ಲ. ನಿಪಿ-3 ಪೋಟೋದಲ್ಲಿ ರಕ್ತದ ಕಲೆಗಳು ಕಾಣುತ್ತಿಲ್ಲ ಎಂದರೆ ಮತ್ತೊಂದು ಪೋಟೋದಲ್ಲಿ ಕಾಣುತ್ತಿದೆ. ನಾವು ಕೃತ್ಯ ನಡೆದ ಸ್ಥಳಕ್ಕೆ ಮಹಜರ್ ಸಮಯ ಹೋದಾಗ ಅಲ್ಲಿಗೆ ಮೊದಲೇ ಪೋಲೀಸರು ಯಾರೂ ಹೋಗಿರಲಿಲ್ಲ. ಪೋಲೀಸರು ಕೃತ್ಯ ನಡೆದ ಸ್ಥಳದ ಅಕ್ಕಪಕ್ಕ ಹುಡುಕಾಡಿ ನೋಡಿದರು. ಮು.ಮಾ 1 ಮತ್ತು 2 ಹೊರತು ಪಡಿಸಿ ಆ ಜಾಗದಲ್ಲಿ ಬೇರೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಮು.ಮಾ 1 ಹಾಗೂ 2 ವಸ್ತುಗಳನ್ನು ಪೋಲೀಸರು ಆ ದಿನ ಅಮಾನತ್ತು ಪಡಿಸಿಕೊಂಡಿರಲಿಲ್ಲ ಹಾಗೂ ಆ ದಿನ ನಾನು ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಲ್ಯಾಪ್‌ಟಾಪ್‌ನಲ್ಲಿ ಮಹಜರನ್ನು ಟೈಪ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸು ಠಾಣೆಗೆ ಹೋಗಿ ಅಲ್ಲಿ ಪ್ರಿಂಟ್ ತೆಗೆದ ನಂತರ ಠಾಣೆಯಲ್ಲಿ ಮಹಜರಿಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅದೇ ಜಾಗದಲ್ಲೇ ಪ್ರಿಂಟ್ ತೆಗೆದರು ಹಾಗೂ ನಾನು ಅದೇ ಜಾಗದಲ್ಲೇ ಸಹಿ ಮಾಡಿದೆ.

18. ಶವ ಪರೀಕ್ಷೆ ಮುಗಿದ ನಂತರ ಮದ್ಯಾಹ್ನ ಸುಮಾರು 12.30-1.00 ಗಂಟೆಗೆ ನಮಗೆ ತಮ್ಮನ ಶವವನ್ನು ಅಂತ್ಯಕ್ರಿಯೆಗಾಗಿ ಕೊಟ್ಟರು. ಇದಾದ 3-4 ದಿನಗಳ ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಈ ಮದ್ಯೆ ನಾನು ಪೋಲೀಸು ಠಾಣೆಗೆ ಹೋಗಿ ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ. ದೂರು ಕೊಟ್ಟಾದ ನಂತರ 4-5 ದಿನಗಳ ನಂತರ ಮಾತ್ರ ನಾನು ಠಾಣೆಗೆ ಹೋಗಿದ್ದೆ. ಸುನಿಲ್ ಕೊಲೆ ಪ್ರಯತ್ನ ಕೇಸು ಬಗ್ಗೆ ವಿಚಾರಿಸಿದಾಗ ನಾನು ಹೇಳಿಕೆ ಕೊಟ್ಟಿದ್ದೆ. ದಿಃ 08.01.2019 ಮತ್ತು 16.01.2019 ರಂದು ಮುಂದುವರೆದ ಹೇಳಿಕೆಗಳಲ್ಲಿ ಪೋಲೀಸರು ಬರೆದುಕೊಂಡ ವಿಚಾರ ನನಗೆ ಗೊತ್ತಿಲ್ಲ. ದೂರಿನಲ್ಲಿ ಬರೆ ದಿರುವ ವಿಚಾರ ಮಾತ್ರ ಗೊತ್ತಿದೆ.

19. ನನ್ನ ತಮ್ಮನ ಕೊಲೆಗೂ ಹಾಗೂ ಈಗ ನ್ಯಾಯಾಲಯದಲ್ಲಿರುವ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ನಾನು ಚಾಸಾ 2 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :**

ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ